ಸಾಕ್ಷಿಯನ್ನು ಮಧ್ಯಂತರ ಅರ್ಜಿ ಸಂಖ್ಯೆ 9 ರ ಮೇಲೆ ಆದ ಆದೇಶದಂತೆ ಸಾಕ್ಷಿಯನ್ನು ಈ ದಿನ ದಿನಾಂಕ 23-12-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರವಾಗಿ ಶ್ರೀ ಐ ಡಿ ಡಬ್ಲೂ ವಕೀಲರಿಂದಃ

ನವಜೀವನ ಆಸ್ಪತ್ರೆಯಲ್ಲಿ ನನ್ನ ತಂದೆ ಮೆಹಬೂಬ ಸಾಬ ಅಬ್ದುಲುಸಾಬ ಪೆಂಡಾರಿ ರವರು ಉಪಚಾರ ಹೊಂದಿದ ಬಗ್ಗೆ ಕೇಸ ಶೀಟನ್ನು ಈಗ ನೊಡುತ್ತಿದ್ದು ಅದನ್ನು ನಿಪಿ - 11 ಅಂತಾ ಎದುರುದಾರ ಪರ ವಕೀಲರ ತಕರಾರರಿಗೆ ಒಳಪಟ್ಟು ಗುರುತಿಸಲಾಯಿತು. (ಎದುರುದಾರ ಪರ ವಕೀಲರು ಸದರಿ ಕೇಸ ಶೀಟ ನಿಪಿ - 11 ರ ದಾಖಲೆಗಳು ಅಪಘಾತಕ್ಕೆ ಸಂಬಂದಿಸಿದ್ದು ಇರುವುದಿಲ್ಲ ಅಂತಾ ತಮ್ಮ ತಕರಾರಿಗೆ ಒಳಪಟ್ಟು ಗುರುಸಲು ವಿನಂತಿಸಿಕೊಂಡಿರುತ್ತಾರೆ.)

ಪಾಟೀ ಸವಾಲುಃ ಎದುರುದಾರ ಪರವಾಗಿ ಶ್ರೀ ಎಸ್ ಬಿ ಪಿ ವಕೀಲರಿಂದಃ

ನಿಪಿ - 11 ರ ಪ್ರಕಾರ ನನ್ನ ತಂದೆಯವರಿಗೆ ಹೊಟ್ಟೆ ನೋವು ಇತ್ತು ಎಂದರೆ ಸರಿಯಲ್ಲ. ಹೀಗಾಗಿ ಅವರು ಆಯಾಸಗೊಂಡು ಜ್ವರದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಅವರಿಗೆ ತುಂಬಾ ವಯಸ್ಸು ಆಗಿದ್ದರಿಂದ ವಯೋಸಹಜ ಕಾಯಿಲೆಗಳಾದ ಹೊಟ್ಟೆ ನೊವು, ಜ್ವರ ಮತ್ತು ಆಯಾಸ ದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಅವರ ಪಚನ ಕ್ರಿಯೆ ಸರಿಯಿರಲಿಲ್ಲ, ಅವರು ತಿನ್ನುತ್ತಿದ್ದ ಆಹಾರ ಸರಿಯಾರ ಪಚನ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ತಂದೆಗೆ ತೆಲೆಗೆ, ಬೆನ್ನಿಗೆ, ಎದೆಗೆ, ಭುಜಗಳಿಗೆ ಪೆಟ್ಟಾಗಿತ್ತು. ಬೈಲಹೊಂಗಲ ಸರ್ಕಾರಿ ಆಸ್ಪತ್ರೆಯ ದಾಖಲೆಯಾದ ನಿಪಿ – 7 ರ ಪ್ರಕಾರ ನನ್ನ ತಂದೆಗೆ ಅಪಘಾತ ದಲ್ಲಿ ಮೂಗಿಗೆ ಮತ್ತು ಹಣೆಗೆ ಮಾತ್ರ ತರಚಿದ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ನಿಪಿ – 7 ಪ್ರಕಾರ ನನ್ನ ತಂದೆ 5 ದಿನಗಳ ವರೆಗೆ ಮಾತ್ರ ಒಳರೋಗಿ ಆಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ ನನ್ನ ತಂದೆ ಅಪಘಾತಕ್ಕೆ ಸಂಬಂದಿಸಿದಂತೆ ಗಾಯಗಳಿಗೆ ಯಾವತ್ತು ಉಪಚಾರ ಪಡೆದಿಲ್ಲ ಎಂದರೆ ಸರಿಯಲ್ಲ. ನಾು ಹಾಜರುಪಡಿಸಿದ ನಿಪಿ – 11 ವಯೊಸಹಜ ವಾಗಿ ನನ್ನ ತಂದೆಗೆ ಸುಸ್ತು, ಹೊಟ್ಟೆ ನೊವು ಮತ್ತು ಜನರಲ್ ವಿಕನೆಸ ಹಾಗೂ ಪಚನ ಕ್ರಿಯೆ ತೊಂದರೆ ಅಂತಾ ಮಾತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಈ ಮೇಲಿನ ಎಲ್ಲ ತೊಂದರೆ ಗಳು ಅಪಘಾತದಿಂದ ಆದ ಗಾಯಗಳಿಂದ ಆಗಿರುತ್ತದೆ ಎಂದು ನುಡಿದಿರುತ್ತಾರೆ.

ನನ್ನ ತಂದೆ ಅಪಘಾತ ಆದ ದಿನದಿಂದ 3 ವರ್ಷ 9 ತಿಂಗಳ ವರೇಗೆ ನನ್ನ ತಂದೆ ಯಾವುದೇ ಆಸ್ಪತ್ರೆಯಲ್ಲಿ ಅಪಘಾತ ಸಂಬಂದಪಟ್ಟ ಗಾಯಗಳಿಗೆ ಉಪಚಾರ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ–11 ಮತ್ತು ನನ್ನ ತಂದೆಗೆ ಅಪಘಾತದಲ್ಲಿ ಆದ ಗಾಯಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನವಜೀವನ ಆಸ್ಪತ್ರೆ ವೈದ್ಯರ ಸಾಕ್ಷಿ ಮಾಡಿಸುತ್ತಿರಾ ಎಂದರೆ ಸಾಕ್ಷಿ ಅವರು ದಾಖಲೆಗಳು ಕೊರ್ಟಗೆ ಪೂರೈಸಿದ್ದರಿಂದ ಅವರು ಬರುವುದಿಲ್ಲ ಎಂದು ನುಡಿದಿರುತ್ತಾರೆ.

M.V.C .NO. 1828/2018
PW-1
dated: 23-12-2024.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.